# ಒನ್ ಶೌಲ್ಡರ್ ಡ್ರೆಸ್

***ಈ ಟ್ಯುಟೋರಿಯಲ್ ನಲ್ಲಿ, ನಾವು ಒನ್ ಶೌಲ್ಡರ್ ಡ್ರೆಸ್ಸ್ ಗೆ ಮಾಡಬೇಕೆಂದು ಕಲಿಯುತ್ತೇವೆ***




## ವಸ್ತುಗಳ ವಿವರ

೪೫ “ ಇಂಚು ಅಗಲವಿರುವ ೩ ಮೀಟರ್ ಪ್ರಕಾಶಮಾನವಾದ ಬಟ್ಟೆ
೪೫” ಇಂಚು ಅಗಲದ ೪ ಮೀಟರ್ ಸ್ಯಾಟಿನ್ ಬಟ್ಟೆ
೪೫” ಇಂಚು ಅಗಲದ ೪ ಮೀಟರ್ ಬಿಳಿ ಲೈನಿಂಗ್ ಬಟ್ಟೆ
೨.೫ ಮೀಟರ್ ಕ್ಯಾನ್ ಕ್ಯಾನ್
ಒಣ್ ಶೌಲ್ಡರ್ ಡ್ರೆಸ್ಸಿನ ಟೆಂಪ್ಲೇಟ್, ಅದನ್ನು www.ushasew.com ನಿಂದ ಡೌನ್ಲೋಡ್ ಮಾಡಿಕೊಳ್ಳಬಹುದು
ಬೀಡೆಡ್ ಪಿನ್ಸ್
ಚಾಲ್ಕ್
ಕತ್ತರಿ
ಮೆಶರಿಂಗ್ ಟೇಪ್
ಮ್ಯಾಚಿಂಗ್ ದಾರ
೮” ಇಂಚು ಕನ್ಸೀಲ್ಡ್ ಜ಼ಿಪ್
ಊಷಾ ಜನೋಮ್ ಜಿಪ್ಪರ್ ಫುಟ್



ನಾವು ಬಟ್ಟೆಯನ್ನು ಟೆಂಪ್ಲೇಟ್ ಸಹಾಯದಿಂದ ಕತ್ತರಿಸುವುದು, ಮೇನ್, ಸ್ಯಾಟಿನ್ ಮತ್ತು ಲೈನಿಂಗ್ ಸ್ಕರ್ಟ್ ಪೀಸಸನ್ನು ಕತ್ತರಿಸುವುದು ಅದರೊಂದಿಗೆ ಯೋಕ್ ಮತ್ತು ಕೊನೆಯದಾಗಿ ಯೋಕನ್ನು ಸ್ಕರ್ಟಿಗೆ ಜಿಪ್ಪರ್ನೊಂದಿಗೆ ಸೇರಿಸಿವುದು.




## ಹಂತ ೧ : ಟೆಂಪ್ಲೇಟನ್ನು ಮಾರ್ಕ್ ಮಾಡಿ ಬಟ್ಟೆಯನ್ನು ಕತ್ತರಿಸುವುದು

ಈಗ ಪ್ರಾರಂಭಿಸೋಣ. ಸ್ಕರ್ಟ್ ಭಾಗಕ್ಕೆ ಒಂದು ಚೆನ್ನಾಗಿರುವ ಬಣ್ಣದ ಪ್ರಕಾಶಮಾನವಾದ ಬಟ್ಟೆಯನ್ನು ತೆಗೆದುಕೊಳ್ಳಿ, ಅದನ್ನು ಪೂರ್ತಿಯಾಗಿ ತೆರೆಯಿರಿ ಪ್ರಿಂಟಿರುವ ಭಾಗ ನಿಮ್ಮನ್ನು ನೋಡುವಂತಿರಬೇಕು ಮತ್ತು ಅದನ್ನು ಉದವಾಗಿ ಅರ್ಧಕ್ಕೆ ಮಡಚಿ ಬಲಭಾಗ ಬಲಭಾಗವನ್ನು ನೋಡುವಂತಿರಬೇಕು. ಇದು ಬಟ್ಟೆಯ ಮಡಚಿರುವ ಭಾಗ.



ಈಗ www.ushasew.com ನಿಂದ ಡೌನ್ಲೋಡ್ ಮಾಡಿಕೊಂಡಿರುವ ಸ್ಕರ್ಟ್ ಟೆಂಪ್ಲೇಟನ್ನು ಬಟ್ಟೆಯ ಮೇಲೆ ಇಡಬೇಕು. ಟೆಂಪ್ಲೇಟನ್ನು ಇಡುವಾಗ ಅದರ ಮೇಲೆ ಫೋಲ್ಡ್ ಎಂದು ಬರೆದಿರುವ ಭಾಗ ಬಟ್ಟೆಯ ಮಡಚಿರುವ ಭಾಗದ ಮೇಲೆ ಇಲ್ಲಿ ತೋರಿಸಿರುವಂತೆ ಇಡಬೇಕು. ಈಗ ಅದನ್ನು ಜಾಗದಲ್ಲು ಬೀಡೆಡ್ ಪಿನ್ ಸಹಾಯದಿಂದ ಪಿನ್ ಮಾಡಿ. ಇದನ್ನು ಮುಗಿಸಿದ ಮೇಲೆ ಚಲ್ಕಿನಿಂದ ಪಿನ್ ಮಾಡಿರುವ ಟೆಂಪ್ಲೇಟನ್ನು ಬಟ್ಟೆಯ ಮೇಲೆ ಟ್ರೇಸ್ ಮಾಡಿ. ಹೆಚ್ಚು ಹುಷಾರಾಗಿ ಕರ್ವ್ ಗಳಲ್ಲಿ ಟ್ರೇಸ್ ಮಾಡಿ. ಮಾರ್ಕಿಂಗ್ ಆದ ಮೇಲೆ ಟೆಂಪ್ಲೇಟನ್ನು ಅನ್ ಪಿನ್ ಮಾಡಿ ಅದನ್ನು ಪಕ್ಕಕಿಡಿ.





ನಂತರ ಕತ್ತರಿಯ ಸಹಾಯದಿಂದ ಟ್ರೇಸ್ ಮಾಡಿರುವ ಟೆಂಪ್ಲೇಟನ್ನು ಕಟ್ ಮಾಡಿ. ಸರಾಂಶ: ಇದು ಬಟ್ಟೆಯ ತಪ್ಪಾದ ಭಾಗ ಮತ್ತು ಇದು ಸರಿಯಾದ ಭಾಗ.






ನೀವು ನೋಡಬಹುದು, ಸ್ಕರ್ಟಿನ ಒಂದು ಭಾಗ ಮಡಚಿರುವ ಭಾಗದ ಮೇಲಿದೆ. ಹಾಗೆಯೇ, ನಾವು ಮೇನ್ ಟೆಂಪ್ಲೇಟಿನಿಂದ ಇನ್ನೂ ಒಂದು ಸ್ಕರ್ಟಿನ ಪೀಸನ್ನು ಕತ್ತರಿಸಬೇಕು. ಈಗ ಸ್ಯಾಟಿನ್ ಮತ್ತು ಲೈನಿಂಗ್ ಬಟ್ಟೆಯನ್ನೂ ಅದೇ ರೀತಿ ಟೆಂಪ್ಲೇಟ್ ಸಹಾಯದಿಂದ ಕಟ್ ಮಾಡಬೇಕು. ಒಟ್ಟಾರೆ ನಮ್ಮ ಹತ್ತಿರ ಲೈನಿಂಗ್, ಸ್ಯಾಟಿನ್ ಮತ್ತು ಮೇನ್ ಬಟ್ಟೆಯ ಎರಡೆರಡು ಪೀಸ್ ಗಳು ಇದೆ.





ನಾವು ಈಗ ಸ್ಕರ್ಟಿನ ಎಲ್ಲಾ ಪೀಸಸನ್ನು ಮುಗಿಸಿದ್ದೇವೆ. ಈಗ ಡ್ರೆಸ್ಸಿನ ಟಾಪ್ ಕಡೆ ಹೋಗೋಣ. ಸ್ಯಾಟಿನ್  ಬಟ್ಟೆಯನ್ನು ತೆಗೆದುಕೊಂಡು ಅದನ್ನು ಮಡಚಿ ಬಲಭಾಗ ಬಲಭಾಗವನ್ನು ನೋಡುವಂತಿರಬೇಕು. ಯೋಕ್ ಎಂದಿರುವ ಟೆಂಪ್ಲೇಟನ್ನು ಅದರ ಮೇಲಿಡಬೇಕು. ಟೆಂಪ್ಲೇಟನ್ನು ಬಟ್ಟೆಗೆ ಬಿಡೆಡ್ ಪಿನ್ ಸಹಾಯದಿಂದ ಪಿನ್  ಮಾಡಿ. ಪಿನ್ ಬಟ್ಟೆಯ ಎರಡೂ ಪದರಕ್ಕೂ ಹೊಗಿದೆಯೇ ಎಂದು ನೋಡಿಕೊಳ್ಳಿ ಈಗ ಚಾಲ್ಕನ್ನು ತೆಗೆದುಕೊಂಡು ಟೆಂಪ್ಲೇಟನ್ನು ಬಟ್ಟೆಯ ಮೇಲೆ ಟ್ರೇಸ್ ಮಾಡಿ. ಇದಾದ ಮೇಲೆ, ಟೆಂಪ್ಲೇಟನ್ನು ಅನ್ ಪಿನ್ ಮಾಡಿ ಅದನ್ನು ಪಕ್ಕಕಿಡಿ.








## ಹಂತ ೨ : ಮೇನ್ ಪೀಸ್ ಮತ್ತು ಸ್ಕರ್ಟಿನ ಪೇಸನ್ನುತಯಾರಿಸುವುದು

ಮೇನ್ ಬಟ್ಟೆಯನ್ನು ತೆರೆದು ಅದರ ಹಿಂಭಾಗದ ಬಟ್ಟೆಯನ್ನು ಮುಂಭಾಗದ ಮೇಲಿಡಬೇಕು ಮತ್ತು ತುದಿಗಳನ್ನು ಸರಿಯಾಗಿ ಮ್ಯಾಚ್ ಮಾಡಬೇಕು. ಇದು ತಪ್ಪಾದ ಭಾಗ ಮತ್ತು ಇದು ಸರಿಯಾದ ಭಾಗ. ಬಟ್ಟೆಗಳು ಬಲಭಾಗ ಬಲಭಾಗವನ್ನು ನೋಡುವಂತೆ ಇಡಬೇಕು. ಟುಟೋರಿಯಲಿನಲ್ಲಿ ಹೇಳಿದಂತೆ ನಾವು ಸೈಡ್ ಸೀಮನ್ನು ಹೊಲೆಯಬೇಕು. ಹೊಲೆಯಲು ಸುಲಭವಾಗುವಂತೆ ಎರಡೂ ಬಟ್ಟೆಯನ್ನು ಒಟ್ಟಿಗೆ ಪಿನ್ ಮಾಡಬೇಕು. ಇದೇ ವಿಧಾನ ಇನ್ನೊಂದು ಕಡೆಗೂ ಮಾಡಬೇಕು. ಎಡ್ಜಸನ್ನು ಮ್ಯಾಚ್ ಮಾಡಿ ಅದನ್ನು ಪಿನ್ ಮಾಡಿ ಆದರೆ ಹೊಲೆಯುವ ಮುನ್ನ ಮೇಲ್ಭಾಗದಿಂದ ೨.೫ ಇಂಚು ಅಳತೆ ಮಾಡಿ ಜಿಪ್ಪರ್ಗಾಗಿ  ಒಂದು ಮಾರ್ಕ್ ಮಾಡಬೇಕು. ನಾವು ಈ ಮಾರ್ಕಿನಿಂದ ಹೊಲೆಯಲು ಪ್ರಾರಂಭಿಸೋಣ ಮತ್ತು ಮೇಲ್ಭಾಗವನ್ನು ತೆರೆದೆ ಇಡೋಣ. ಈ ಮಾರ್ಕಿನಲ್ಲಿ ಪಿನ್ ಮಾಡಿ.










ಇದನ್ನು ಮುಗಿಸಿದ ಮೇಲೆ, ಮೇನ್ ಬಟ್ಟೆಯನ್ನು ಪಕ್ಕಕಿಟ್ಟು ಇದೇ ವಿಧಾನವನ್ನು ಸ್ಯಾಟಿನ್ ಬಟ್ಟೇ ಮೇಲೆ ಮಾಡಬೇಕು. ಎಡ್ಜಸನ್ನು ಮ್ಯಾಚ್ ಮಾಡಿ ಪಿನ್ ಮಾಡಿ. ೨.೫ ಇಂಚು ಜಿಪ್ಪರ್ ಗ್ಯಾಪ್ ಬಿಟ್ಟು ಮಾರ್ಕ್ ಮೇಲೆ ಪಿನ್ ಮಾಡಿ. ಸೈಡ್ ಸೀಮ್ಸಿನ ಎಡ್ಜಸನ್ನು ಮಾರ್ಕ್ ಮಾಡಿ ಮತ್ತಿ ಬಾಟಮ್ ಹೆಮ್ಮನ್ನು ಮುಗಿಸಿ.





ಪಿನ್ ಮಾಡಿರುವ ಬಟ್ಟೆಯನ್ನು ಊಷಾ ಜನೋಮ್ ಮಯ್ ಫ್ಯಾಬ್ ಬಾರ್ಬಿ ಸೀವಿಂಗ್ ಮಷೀನಿನ ಹತ್ತಿರ ತೆಗೆದುಕೊಂಡು ಹೋಗಿ. ಮೇನ್ ಬಟ್ಟೆಯಿಂದ ಪ್ರಾರಂಭಿಸೋಣ, ಬಟ್ಟೆಯ ಎಡ್ಜನ್ನು ಪ್ರೆಸರ್ ಫುಟಿಗೆ ಅಲೈನ್ ಮಾಡಿ ಹೊಲೆಯಲು ಪ್ರಾರಂಭಿಸಿ. ಸ್ವಲ್ಪ ರಿವರ್ಸ್ ಹೊಲಿಗೆಯಿಂದ ಶುರು ಮಾಡಿ. ನಿಧಾನವಾಗಿ ಮತ್ತು ಭದ್ರವಾಗಿ ಸ್ಕರ್ಟಿನ ಮೇಲ್ಭಾಗದವರೆಗೂ ಹೊಲೆಯುತ್ತಾ ಹೋಗಿ. ೨.೫ ಇಂಚು ಮಾರ್ಕ್ ಮಾಡಿರುವ ವರೆಗೂ ಹೊಲೆದು ನಿಲ್ಲಿಸಿ ಇದನ್ನು ಜಿಪ್ಪರ್ಗಾಗಿ ಬಿಟ್ಟಿದ್ದೇವೆ. ನಿಲ್ಲಿಸುವ ಮೊದಲು ಒಂದು ಜೊತೆ ರಿವರ್ಸ್ ಹೊಲಿಗೆಯನ್ನು ಹಾಕಿ.  ಯಾವುದಾದರೂ ಹೆಚ್ಚಾದ ದಾರ ಅಥವಾ ಬಟ್ಟೆಯಿದ್ದರೆ ಅದನ್ನು ಕತ್ತರಿಸಿ.ಮೇನ್ ಬಟ್ಟೆಯ ಇನ್ನೊಂದು ಭಾಗಕ್ಕೆ ಹೋಗೋಣ. ಇನ್ನೊಂದು ಕಡೆ ಪೂರ್ತಿಯಾಗಿ ಹೊಲೆಯಿರಿ.








ಇದನ್ನು ಮುಗಿಸಿದ ಮೇಲೆ ಮೇನ್ ಬಟ್ಟೆಯನ್ನು ಪಕ್ಕಕ್ಕಿಟ್ಟು ಸ್ಯಾಟಿನ್ ಬಟ್ಟೆಯ ಸೈಡ್ ಸೀಮನ್ನು ಹೊಲೆಯಿರಿ. ಇದನ್ನು ಪೂರ್ತಿಯಾಗಿ ಹೊಲೆದು ಪಿನ್ ಗಳನ್ನು ತೆಗೆಯಿರಿ. ಇದೇ ವಿಧಾನ ಇನ್ನೊಂದು ಕಡೆಗೂ ಪುನರಾವರ್ತಿಸಬೇಕು, ಆದರೆ ನೆನಪಿರಲಿ ೨.೫ ಇಂಚು ಮೇಲಿನಿಂದ ತುದಿಗೆ ಗ್ಯಾಪ್ ಬಿಡಬೇಕು. ಮೇನ್ ಬಟ್ಟೆಗೆ ಮಾಡಿದಂತೆ ಇರಬೇಕು.






ಇದನ್ನು ಮುಗಿಸಿದ ಮೇಲೆ, ಪ್ಯಾಟರ್ನ್ ಸೆಲೆಕ್ಟರನ್ನು C ಜಿಗ್ ಜಾಗ್ ಗಾಗಿ ಮತ್ತು ಹೊಲಿಗೆಯ ಉದ್ದ ೧.೫ ಇಟ್ಟು ಕೊನೆಯಿಂದ ಹೊಲೆಯಲು ಪ್ರಾರಂಭಿಸಿ. ಜಿಗ್ ಜಾಗ್ ಹೊಲಿಗೆ ಫ್ರೆಯಿಂಗ್ ರೇಷ್ಮೆ ಬಟ್ಟೆಯ ಎಡ್ಜನ್ನು ತಡೆಯುತ್ತದೆ. ನಾವು ೨.೫ ಇಂಚು ಗ್ಯಾಪನ್ನು ತಲುಪಿದಾಗ ನಿಲ್ಲಿಸಿ ದಾರವನ್ನು ಕತ್ತರಿಸಿ. ನಾವು ಪ್ರತಿ ಪದರದಲ್ಲೂ ಪ್ರತ್ಯೇಕ ಹೊಲಿಗೆಯನ್ನು ಹಾಕಬೇಕು. ಮೇಲ್ ಪದರವನ್ನು ಪ್ರೆಸರ್ ಫುಟಿನ ಕೆಳಗೆ ಇಟ್ಟು ಹೊಲೆಯಲು ಪ್ರಾರಂಭಿಸಿ. ದಾರವನ್ನು ಕತ್ತರಿಸಿ ಜಿಗ್ ಜಾಗನ್ನು ಸ್ಕರ್ಟಿನ ಇನ್ನೊಂದು ತುದಿಗೆ ಹಾಕಬೇಕು. ನಮ್ಮ ಸೈಡ್ ಸೀಮ್ಸ್ ಮುಗಿದಿದೆ. ಈಗ ಬಾಟಮ್ ಹೆಮ್ಮಿನ ಕಡೆ ಹೋಗೋಣ.


ಟುಟೋರಿಯಲಿನಲ್ಲಿ ತೋರಿಸಿರುವಂತೆ ಬಾಟಮನ್ನು ಅರ್ಧ ಇಂಚು ಎರಡು ಬಾರಿ ಮಡಚಿ. ನಾವು ಮಡಚಿರುವ ಭಾಗದ ಮೇಲೆ ಹೊಲೆಯಬೇಕು. ಅದನ್ನು ಹೊಲೆಯುವ ಮುನ್ನ ಪ್ರೆಸ್ಸರ್ ಫುಟಿನ ಕೆಳಗೆ ಅಲೈನ್ ಮಾಡಿ. ಆದರೆ ಪ್ರಾರಂಭಿಸುವ ಮುನ್ನ ಸೆಟ್ಟಿಂಗನ್ನು ಮತ್ತೆ ಹಿಂದಕ್ಕೆ ಸೆಟ್ ಮಾಡಿ, ನೇರ ಹೊಲಿಗೆ ಮತ್ತು ಪ್ಯಾಟರ್ನ್ ಸೆಲೆಕ್ಟರನ್ನು A ಹೊಲಿಗೆಯ ಉದ್ದವನ್ನು ೨.೫ ಗೆ ಹಾಕಬೇಕು. ಹೊಲೆಯಲು ಪ್ರಾರಂಭಿಸಿ, ಬಾಟಮಿನ ವರೆಗೂ ಹೊಲೆಯುತ್ತಾ ಮಡಚುತ್ತಾ ಹೋಗಿ. ಇದನ್ನು ಮುಗಿಸಿದ ಮೇಲೆ, ದಾರವನ್ನ ಕತ್ತರಿಸಿ. ನಿಮ್ಮ ಅಂತಿಮ ಹೊಲಿಗೆ ನೋಡಲು ಹೀಗೆ ಕಾಣಬೇಕು. ಹಾಗೆಯೇ, ನಾವು ಬಾಟಮ್ ಹೆಮ್ಮನ್ನು ಮೇನ್ ಬಟ್ಟೆಗೆ ಮಾಡಬೇಕು. ಬಟ್ಟೆ ಸೂಕ್ಷ್ಮವಾಗಿರುವುದರಿಂದ, ನಿಧಾನವಾಗಿ ಮಡಚುತ್ತಾ ಹೋಗಿ.






ನೀವು ನೋಡಬಹುದು, ನಾವು ಸ್ಯಾಟಿನ್ ಬಟ್ಟೆಯ ಸೈಡ್ ಸೀಮನ್ನು ಹೊಲೆದಿದ್ದೇವೆ ಮತ್ತು ಬಾಟಮನ್ನು ಹೆಮ್ಮ್ ಮಾಡಿದೇವೆ. ಮೇನ್ ಬಟ್ಟೆಯ ಮೇಲೂ ಹೀಗೆ ಮಾಡಿದ್ದೇವೆ, ನಾವು ಸೈಡ್ಸನ್ನು ಹೊಲೆದು ಬಾಟಮ್ಮನ್ನು ಹೆಮ್ಮ್ ಮಾಡಿದ್ದೇವೆ.

## ಹಂತ ೩ : ಲೈನಿಂಗ್ ಬಟ್ಟೆಯನ್ನು ಕಾನ್ ಕಾನಿನೊಂದಿಗೆ ತಯಾರಿಸುವುದು


ಈಗ ಲೈನಿಂಗ್ ಬಟ್ಟೆಯ ಕೆಲಸ ಮಾಡೋಣ. ನಿಮ್ಮ ಹತ್ತಿರ ಎರಡು ಪೀಸ್ ಲೈನಿಂಗ್ ಇರಬೇಕು, ಒಂದು ಮುಂಭಾಗಕ್ಕೆ ಮತ್ತು ಇನ್ನೊಂದು ಹಿಂಭಾಗಕ್ಕೆ. ಆದರೆ ಈಗ ನಾವು ಒಂದರ ಕೆಲಸ ಮಾಡೋಣ. ೨.೫ ಮೀಟರ್ ಕಾನ್ ಕಾನನ್ನು ತೆಗೆದುಕೊಂಡು ಅದನ್ನು ಅರ್ಧಕ್ಕೆ ಮಡಚಿ ಕಟ್ ಮಾಡಿ. ಒಂದು ಅರ್ಧವನ್ನು ಪಕ್ಕಕಿಟ್ಟು ಇನ್ನೊಂದು ಅರ್ಧವನ್ನು ಅರ್ಧಕ್ಕೆ ಮಡಚಿ, ನಾವು ಇದನ್ನು ಲೈನಿಂಗ್ ಬಟ್ಟೆಗೆ ಸೇರಿಸಬೇಕು. ಆದರೆ ಅದರ ಮೊದಲು ಲೈನಿಂಗ್ ಬಟ್ಟೆಯ ಮೇಲ್ಭಾಗದಿಂದ ೪ಇಂಚು ಮಾರ್ಕ್ ಮಾಡಿ. ಇದನ್ನು ಸ್ಕರ್ಟ್ ಪೀಸಿನ ವೇಸ್ಟ್ ಲೈನಿಗೂ ಮಾಡಬೇಕು. ಲೈನಿಂಗ್ ಬಟ್ಟೆಯನ್ನು ತೆರೆಯಿರಿ ಟುಟೋರ್ಇಯಲಿನಲ್ಲಿ ತೋರಿಸಿರುವಂತೆ ೪ ಇಂಚು ಮಾರ್ಕ್ ಮಾಡಿ. ಕಾನ್ ಕಾನ್ ಮೇಲೆ ನೆರಿಗೆಗಳನ್ನು ಮಾಡುತ್ತಾ ಬಟ್ಟೆಯನ್ನು ಪಿನ್ ಮಾಡುತ್ತಾ ಹೋಗಿ. ನೆರಿಗೆಯ ಅಳತೆ ೩/೪ ಇಂಚು ಇರಬೇಕು. ಬಟ್ಟೆಯ ಮಧ್ಯಭಾಗವನ್ನು ತಲುಪಿದಾಗ ಇನ್ನೊಂದು ತುಸಿಗೆ ಹೋಗಿ ಮತ್ತು ಇದೇ ವಿಧಾನವನ್ನು ಮತ್ತೆ ಅಲ್ಲಿಂದ ಪ್ರಾರಂಭಿಸಿ ನೆರಿಗೆಗಳನ್ನು ಮಧ್ಯಕ್ಕೆ ಹೊಂದಿಸುತ್ತಾ ಹೋಗಬಹುದು. ನಿಮ್ಮ ನೆರಿಗೆಗಳು ಪಿನ್ ಮಾಡಿದ ಮೇಲೆ ನೋಡಲು ಹೀಗೆ ಕಾಣಬೇಕು. ಇದೇ ವಿಧಾನ ಇನ್ನೊಂದು ಪೀಸಿಗೂ ಮತ್ತು ಲೈನಿಂಗ್ ಬಟ್ಟೆಗೂ ಮಾಡಬೇಕು.






ಒಮ್ಮೆ ಪೀಸ್ ಗಳು ತಯಾರಾದ ಮೇಲೆ ನಾವು ಎರಡು ಲೈನಿಂಗ್ ಪೀಸನ್ನು ಒಟ್ಟಿಗೆ ಸೇರಿಸಬೇಕು. ಎರಡು ಬಟ್ಟೆಯನ್ನು ಒಂದರ ಮೇಲೆ ಒಂದನ್ನು ಇಡಬೇಕು, ಬಲಭಾಗ ಬಲಭಾಗವನ್ನು ನೋಡುವಂತಿರಬೇಕು.ಈಗ ನೆರಿಗೆಯನ್ನ, ಸೈಡ್ ಸೀಮನ್ನು ಹೊಲೆದು ಬಾಟಮನ್ನು ಹೆಮ್ಮ್ ಮಾಡುವ ಸಮಯ.



ಪಿನ್ ಮಾಡಿರುವ ಬಟ್ಟೆಗಳನ್ನು ಮಷೀನಿನ ಹತ್ತಿರ ತೆಗೆದುಕೊಂಡು ಹೋಗಿ. ನಾವು ಒಂದು ಲೈನಿಂಗ್ ಬಟ್ಟೆಯ ಕೆಲಸ ಮಾಡೋಣ ಮತ್ತು ಹೊಲೆಯಲು ಪ್ರಾರಂಭಿಸಿ. ನಿಧಾನವಾಗಿ ನೆರಿಗೆಗಳನ್ನು ಹೊಲೆಯಿರಿ ಮತ್ತು ಹೊಲೆಯುತ್ತಾ ಪಿನ್ ಗಳನ್ನು ತೆಗೆಯುತ್ತಾ ಹೋಗಿ, ಈ ಹಂತ ಸ್ವಲ್ಪ ಕಷ್ಟವೆನಿಸಬಹುದು ನಿಮ್ಮ ಬೆರಳಿನ ಮೇಲೆ ಗಮನವಿರಲಿ, ಯಾವುದೇ ಏಟಾಗದಂತೆ ನೋಡಿಕೊಳ್ಳಿ, ಇದೇ ವಿಧಾನವನ್ನು ಇನ್ನೊಂದು ಬಟ್ಟೆಗೂ ಮಾಡಬೇಕು. ಅಂತಿಮ ನೆರಿಗೆ ನೋಡಲು ಹೀಗೆ ಕಾಣಬೇಕು. ಈಗ ಬಟ್ಟೆಯನ್ನು ಪ್ರೆಸ್ಸರ್ ಫೂಟಿಗೆ ಅಲೈನ್ ಮಾಡಿ ಹೊಲೆಯಲು ಪ್ರಾರಂಭಿಸಿ. ವೇಸ್ಟಿನಿಂದ ಪ್ರಾರಂಭಿಸಿ ಬಾಟಮಿನವರೆಗೂ ಹೊಲೆಯಬೇಕು. ಇದಾದ ಮೇಲೆ ದಾರವನ್ನು ಕತ್ತರಿಸಿ.





ಇನ್ನೊಂದು ಕಡೆ, ಮೇಲ್ಭಾಗದಿಂದ ಜಿಪ್ಪರಿಗಾಗಿ ಬಿಟ್ಟು ೨.೫ ಇಂಚು ಬಿಟ್ಟು ಹೊಲೆಯಲು ಪ್ರಾರಂಭಿಸಿ. ಹೊಲಿಗೆಯನ್ನು ಭದ್ರವಾಗಿಸಲು ಪ್ರಾರಂಭದಲ್ಲಿ ಮತ್ತು ಅಂತ್ಯದಲ್ಲಿ ರಿವರ್ಸ್ ಹೊಲಿಗೆಯನ್ನು ಹಾಕಲು ಮರೆಯಬೇಡಿ. ಇದನ್ನು ಮುಗಿಸಿದ ಮೇಲೆ, ನಾವು ಬಾಟಮಿನ ಕಡೆ ಹೋಗೋಣ. ಮೊದಲಿನಂತೆ, ಬಟ್ಟೆಯನ್ನು ಅರ್ಧ ಇಇಂಚು ಎರಡು ಬಾರಿ ಮಡಚಿ.  ಬಟ್ಟೆಯನ್ನು ಪ್ರೆಸ್ಸರ್ ಫುಟಿಗೆ ಅಲೈನ್  ಮಾಡಿ ಮಡಚಿರುವ ಭಾಗದ ಮೇಲೆ ಹೊಲೆಯಿರಿ. ಬಟ್ಟೆಯ ಸುತ್ತಲೂ ಹೊಲೆಯುತ್ತಾ ಹೋಗುವಾಗ ಅದನ್ನು ಮಡಚುತ್ತಾ ಹೋಗಿ.







ನೀವು ನೋಡಬಹುದು, ನಾವು ಕಾನ್ ಕಾನನ್ನು ಲೈನಿಂಗ್ ಬಟ್ಟೆಗೆ ಸೇರಿಸಿದ್ದೇವೆ ಮತ್ತು ಸೈಡ್ ಸೀಮನ್ನು ಹೊಲೆದಿದ್ದೇವೆ.




## ಹಂತ ೪ : ಯೋಕನ್ನುತಯಾರಿಸುವುದು





ನಾವೀಗ ಒನ್ ಶೋಲ್ಡರ್ ಡ್ರೆಸ್ಸಿನ ಟಾಪ್ ಭಾಗದ ಕೆಲಸವನ್ನು ಮಾಡೋಣ. ನಮ್ಮ ಹತ್ತಿರ ಸ್ಯಾಟಿನ್ ಬಟ್ಟೆ ಮತ್ತು ಲೈನಿಂಗ್ ಬಟ್ಟೆ ಎರಡೂ ತಯಾರಾಗಿದೆ. ಈಗ ಪೀಸ್ಗಳನ್ನು ಭುಜದ ಭಾಗ ಹೊಲೆಯುತ್ತಾ ಸೇರಿಸೋಣ. ಮುಂಭಾಗದ ಲೈನಿಂಗ್ ಬಟ್ಟೆಯನ್ನು ಹಿಂಭಾಗದ ಬಟ್ಟೆಯ ಮೇಲೆ ಇಡಬೇಕು, ಬಲಭಾಗ ಬಲಭಾಗವನ್ನು ನೋಡುವಂತಿರಬೇಕು. ಭುಜದ ಭಾಗದ ಲೈನಿಂಗ್ ಬಟ್ಟೆಯನ್ನು ಒಟ್ಟಿಗೆ ಪಿನ್ ಮಾಡಿ. ನಂತರ ಮೇನ್ ಬಟ್ಟೆಯನ್ನು ಒಟ್ಟಿಗೆ ಪಿನ್ ಮಾಡಿ.




ಪಿನ್ ಮಾಡಿರುವ ಬಟ್ಟೆಯನ್ನು ಸೀವಿಂಗ್ ಮಷೀನಿನ ಬಳಿ ತೆಗೆದುಕೊಂಡು ಹೋಗಿ, ಸ್ಯಾಟಿನ್ ಬಟ್ಟೆಯ ತುದಿಯನ್ನು ಪ್ರೆಸ್ಸರ್ ಫುಟಿನ ಕೆಳಗೆ ಅಲೈನ್ ಮಾಡಿ ಹೊಲೆಯಲು ಪ್ರಾರಂಭಿಸಿ. ರಿವರ್ಸ್ ಹೊಲಿಗೆ ಹಾಕಲು ಮರೆಯಬೇಡಿ. ಇದನ್ನು ನೀವು ಮುಗಿಸಿದ ಮೇಲೆ ದಾರವನ್ನು ಕತ್ತರಿಸಿ ಲೈನಿಂಗ್ ಬಟ್ಟೆಯ ಭುಜದ ಭಾಗವನ್ನು ಹೊಲೆಯಿರಿ.






ನೀವು ನೋಡಬಹುದು, ನಾವು ಮೇನ್ ಬಟ್ಟೆ ಮತ್ತು ಲನಿಂಗ್ ಬಟ್ಟೆಯನ್ನೂ ಹೊಲೆದಿದ್ದೇವೆ. ಈಗ ಬಟ್ಟೆಯನ್ನು ತೆರೆಯಿರಿ ಮತ್ತು ಲೈನಿಂಗ್ ಬಟ್ಟೆಯನ್ನು ಸ್ಯಾಟಿನ್ ಬಟ್ಟೆಯ ಮೇಲೆ ಇಡಬೇಕು. ಬಲಭಾಗ ಬಲಭಾಗವನ್ನು ನೋಡುವಂತಿರಬೇಕು.















ನಾವು ಆರ್ಮ್ ಹೋಲನ್ನು, ನೆಕ್ ಲೈನನ್ನು ಮತ್ತು ಸೈಡ್ ಸೀಮನ್ನು ಹೊಲೆಯಬೇಕು. ಮೊದಲು ಆರ್ಮ್ ಹೋಲಿನಿಂದ ಪ್ರಾರಂಭಿಸೋಣ. ಬಟ್ಟೆಯನ್ನು ಪ್ರೆಸ್ಸರ್ ಫುಟಿನ ಕೆಳಗೆ ಅಲೈನ್ ಮಾಡಿ ಹೊಲೆಯಲು ಪ್ರಾರಂಭಿಸಿ. ನಂತರ, ನಾವು ನೆಕ್ ಲೈನಿನ ಕೆಲಸ ಮಾಡೋಣ. ಇದು ಮುಗಿದ ಮೇಲೆ, ಬಟ್ಟೆಯನ್ನು ಒಳಗಿನಿಂದ ಹೊರಕ್ಕೆ ಕೆಳಗಿನಿಂದ ತಿರುಗಿಸಿ

ಕರ್ವ್ ಸೀಮಿನಲ್ಲಿ ನಿಧಾನವಾಗಿ ಪ್ರೆಸ್ ಮಾಡಿ. ಈಗ ನಾವು ೧/೪ ಇಂಚು ಟಾಪ್ ಸ್ಟಿಚನ್ನು ನೆಕ್ ಲೈನ್ ಮೇಲೆ ಮಾಡೋಣ. ಬಟ್ಟೆಯನ್ನು ಪ್ರೆಸ್ಸರ್ ಫುಟಿನ ಕೆಳಗೆ ಇಟ್ಟು ಹೊಲೆಯಲು ಪ್ರಾರಂಭಿಸಿ. ಇದನ್ನು ಮುಗಿಸಿದ ಮೇಲೆ ಟಾಪ್ ಸ್ಟಿಚನ್ನು ಆರ್ಮ್ ಹೋಲಿನ ಮೇಲೂ ಪುನರಾವರ್ತಿಸಿ.

ಈಗ ನಾವು ಸೈಡ್ ಸೀಮಿನ ಕಡೆ ಹೋಗೋಣ. ನಾವಿ ಈ ಕ್ಷಣಕ್ಕೆ ಸೈಡ್ ಸೀಮೊಂದನ್ನೇ ಹೊಲೆಯಬೇಕಾಗಿರುವುದು. ಹೊಲೆಯಲು ಪ್ರಾರಂಭಿಸಿ ಮತ್ತು ರಿವರ್ಸ್ ಹೊಲಿಗೆಯನ್ನು ಪ್ರಾರಂಭದಲ್ಲಿ ಮತ್ತು ಕೊನೆಯಲ್ಲಿ ಹಾಕಲು ಮರೆಯಬೇಡಿ.

ನಿಮ್ಮ ಅಂತಿಮ ಹೊಲಿಗೆಗಳು ನೋಡಲು ಹೀಗೆ ಕಾಣಬೇಕು. ನಾವು ಇನ್ನು ಇನ್ನೊಂದು ಸೈಡ್ ಸೇಮನ್ನು ಹೊಲೆಯಬೇಕು ಆದರೆ ಅದಕ್ಕೂ ಮೊದಲು ನಾವು ಸ್ಕರ್ಟನ್ನು ಯೋಕಿಗೆ ಸೇರಿಸಬೇಕು.

## ಹಂತ ೫ : ಸ್ಕರ್ಟನ್ನು ಯೋಕಿಗೆ ಸೇರಿಸುವುದು





ಸ್ಕರ್ಟನ್ನು ತಯಾರು ಮಾಡುವುದರಿಂದ ಈಗ ಯೋಕನ್ನು ಈಗ ಪಕ್ಕಕಿಡಿ. ಟುಟೋರಿಯಲಿನಲ್ಲಿ ತೋರಿಸಿರುವಂತೆ ಲೈನಿಂಗ್ ಬಟ್ಟೆಯನ್ನು ಮೇಜಿನ ಮೇಲಿಡಿ ಮತ್ತು ಅದರ ಮೇಲೆ ಸ್ಯಾಟಿನ್ ಬಟ್ಟೆಯನ್ನು ಇಡಿ ಹಾಗು ಅದರ ಮೇಲೆ ಮೇನ್ ಬಟ್ಟೆ, ಬಟ್ಟೆಗಳನ್ನು ಅಲೈನ್ ಮಾಡಿ ಮತ್ತು ಎಲ್ಲಾ ಬಟ್ಟೆಯ ವೇಸ್ಟನ್ನು ಬೇಡೆಡ್ ಪಿನ್ ನಿಂದ ಪಿನ್ ಮಾಡಿ. ಪಿನ್ ಮಾಡಿದ ಮೇಲೆ, ಅದನ್ನು ಸಮವಾದ ಮೇಜಿನ ಮೇಲಿಡಿ, ನೀವು ನೋಡಬಹುದು  ಜಿಪ್ಪರಿಗಾಗಿ ಓಪೆನಿಂಗ್ ಇದೆ.






ನಂತರ, ಯೋಕ್ ಪೀಸನ್ನು ತೆಗೆದುಕೊಳ್ಳಿ, ನಾವು ಯೋಕಿನ ವೇಸ್ಟ್ ಲೈನನ್ನು ಸ್ಕರ್ಟಿನ ವೇಸ್ಟ್ ಲೈನಿಗೆ ಪಿನ್ ಮಾಡಬೇಕು. ಬಲಭಾಗ ಬಲಭಾಗವನ್ನು ನೋಡುವಂತೆ. ವೇಸ್ಟಿನ ಸುತ್ತಲೂ ಪಿನ್ ಮಾಡಿ. ಪಿನ್ ಬಟ್ಟೆಯ ಎಲ್ಲಾ ಪದರಕ್ಕೂ ಹೋಗುವಂತೆ ನೋಡಿಕೊಳ್ಳಿ, ನಾವು ನಮ್ಮ ಜಿಪ್ಪರನ್ನೂ ಕೂಡ ಓಪೆನಿಂಗಿನಲ್ಲಿ ಸೇರಿಸಬೇಕು.





ಎಲ್ಲಾ ಪೀಸ್ ಗಳನ್ನು ಮಷೀನಿನ ಹತ್ತಿರ ತೆಗೆದುಕೊಂಡು ಹೋಗಿ. ಎಲ್ಲಾ ಸ್ಕರ್ಟ್ ಪೀಸ್ ಗಳನ್ನು ಯೋಕಿನೊಂದಿಗೆ  ಅಲೈನ್ ಮಾಡಿ ಹೊಲೆಯಲು ಪ್ರಾರಂಭಿಸಿ. ರಿವರ್ಸ್ ಹೊಲಿಗೆಯನ್ನು ಪ್ರಾರಂಭದಲ್ಲಿ ಮತ್ತು ಕೊನೆಯಲ್ಲಿ ಹಾಕಲು ಮರೆಯಬೇಡಿ. ಎಲ್ಲಾ ಬಟ್ಟೆಗಳೂ ಯೋಕಿನೊಂದಿಗೆ ಒಟ್ಟಿಗೆ ಹೊಲಿಗೆಯಾಗುತ್ತಿದೆಯೇ ಎಂದು ನೋಡಿಕೊಳ್ಳಿ






ನೀವು ನೇರ ಹೊಲಿಗೆಯನ್ನು ಮುಗಿಸಿದ ಮೇಲೆ, ಒಂದು ಸುತ್ತು ಜಿಗ್

ಜಾಗ್ ಹೊಲಿಗೆಯನ್ನು ಅಚ್ಚುಕಟ್ಟಾದ ಫೀನಿಷಿಂಗಿಗೆ ಮಾಡಿ. ಪ್ಯಾಟರ್ನ್ ಸೆಲೆಕ್ಟರನ್ನಿ ಸಿ ಮತ್ತು ಹೊಲಿಗೆಯ ಉದ್ದವನ್ನು ೧.೫ ಗೆ ಇಟ್ಟು ಹೊಲೆಯಲು ಪ್ರಾರಂಭಿಸಿ. ಜಿಗ್ ಜಾಗ್ ಹೊಲಿಗೆಗೆ ರಿವರ್ಸ್ ಹೊಲಿಗೆಯ ಅವಶ್ಯಕತೆಯಿರುವುದಿಲ್ಲ.`














ಇದು ಪೂರ್ತಿಯಾದ ಮೇಲೆ, ನಿಮ್ಮ ಅಂತಿಮ ಹೊಲಿಗೆಗಳು ಹೀಗೆ ಕಾಣಬೇಕು.ಈಗ ಜಿಪನ್ನು ಸೇರಿಸೋಣ, ಜಿಪಿನ ಬಲಭಾಗವನ್ನು ಬಟ್ಟೆಯ ಬಲಭಾಗದ ಮೇಲಿಟ್ಟೂ ಅದನ್ನು ಹೊಲೆಯದೆ ಇರುವ ಭಾಗದ ಮೇಲಿಡಿ. ಜಿಪ್ಪರನ್ನು ಡ್ರೆಸ್ಸಿಗೆ ಹೊಲೆಯಲು ಊಷಾ ಜನೋಮ್ ಮೈ ಫ಼ಯಾಬ್ ಬಾರ್ಬೀ ಹೊಲಿಗೆ ಯಂತ್ರದ ರೆಗ್ಯುಲರ್ ಫುಟನ್ನು ತೆಗೆದು ಜಿಪ್ಪರ್ ಫುಟ್ ಹಾಕಿ. ಪ್ಯಾಟರ್ನ್ ಸೆಲೆಕ್ಟರನ್ನು ಏ ಗೆ ಮತ್ತು ಹೊಲಿಗೆಯ ಉದ್ದವನ್ನು ೨.೫ ಇಟ್ಟು ಜಿಪ್ಪರನ್ನು ತೆರೆದು ಜಿಪ್ಪರಿನ ಒಂದು ಕಡೆಯನ್ನು ಡ್ರೆಸ್ಸಿನ ಒಂದು ಕಡೆಗೆ ಹೊಲೆಯಿರಿ. ಇದನ್ನು ಮುಗಿಸಿದ ಮೇಲೆ ಬಟ್ಟೆಯನ್ನು ಹಿಂದಿನಿಂದ ಮುಂದಕ್ಕೆ ತಿರುಗಿಸಿ ಇನ್ನೋಂದು ಕಡೆಯ ಜಿಪ್ಪರನ್ನು ಡ್ರೆಸ್ಸಿನ ಇನ್ನೊಂದು ಓಪೆನಿಂಗಿಗೆ ಹೊಲೆಯಬೇಕು. ಬಲಭಾಗ ಬಲಭಾಗವನ್ನು ನೋಡುವಂತೆ. ಈಗ ಜಿಪ್ ಡ್ರೆಸ್ಸಿಗೆ ಸೇರಿಸಿದ್ದಾಗಿದೆ. ಜೊತೆಗೆ, ನಾವು ಒಂದು ಸುತ್ತು ಗ್ರೂವಿನಲ್ಲಿ ಹೊಲಿಗೆಯನ್ನು ಜಿಪ್ಪರಿನ ಮೇಲ್ಭಾಗದಲ್ಲಿ ಎರಡೂ ಕಡೆ ಹಾಕೋಣ.

ಅಂತಿಮ ಹೊಲಿಗೆಗಳು ಹೀಗೆ ಕಾಣಬೇಕು ಆದರೆ ನಾವು ಇನ್ನೂ ಮುಗಿಸಿಲ್ಲ, ಕೊನೆಯ ಹಂತವನ್ನು ಮಾಡಲು ಜಿಪ್ಪರ್ ಫುಟನ್ನು ತೆಗೆದು ರೆಗ್ಯುಲರ್ ಫುಟನ್ನು ಹಾಕಿ. ಮಷೀನನ್ನು ಜಿಗ್ ಜ಼ಾಗ್ ಹೊಲಿಗೆಗೆ ಹಾಕಿ ಇನ್ನೊಮ್ಮೆ ಜಿಪ್ಪರಿನ ಮೇಲೆ ಲೈನಿಂಗಿಗೆ ಭದ್ರವಾಗಿ ಸೇರಿಸಲು ಹೊಲೆಯಿರಿ. ಜಿಪ್ಪರಿನ ಎರಡೂ ಕಡೆನೂ ಹೊಲೆಯಿರಿ. ಈಗ ನಾವು ಮುಗಿಸಿದ್ದೇವೆ!

ನೀವು ನೋಡಬಹುದು, ನಾವು ಯೋಕನ್ನು ಸ್ಕರ್ಟಿಗೆ ಸೇರಿಸಿದ್ದೇವೆ ಜಿಪ್ಪರಿನೊಂದಿಗೆ.

ನೀವು ನಿಮ್ಮ ಡ್ರೆಸ್ಸನ್ನು ನಿಮ್ಮಿಷ್ಟದಂತೆ ಅಲಂಕರಿಸಬಹುದು. ನಾವು ಒಂದು ಮುದ್ದಾದ ಹೂವಿನ ಬ್ರೋಚನ್ನು ತೋಳಿಗೆ ಒಂದು ಸುಂದರವಾದ ಲೇಸಿನ ಪೀಸನ್ನು ಸೊಂಟಕ್ಕೆ ಹಾಕಿದ್ದೇವೆ. ನಿಮ್ಮ ಪುಟ್ಟ ಹುಡುಗಿ ಈ ಡ್ರೆಸ್ಸಿನಲ್ಲಿ ಒಂದು ಗುಲಾಬಿ ಬಣ್ಣದ ಮ್ಯಾಚಿಂಗ್ ಅಸ್ಸೆಸರಿಯೊಂದಿಗೆ ರಾಣೀಯಂತೆ ಕಾಣುವಳು. ನಿಮಗೆ ಟುಟೋರಿಯಲ್ ಎಷ್ಟು ಇಷ್ಟವಾಯಿತೆಂದು ಕಮೆಂಟಿನಲ್ಲಿ ತಿಳಿಸಿ ಮತ್ತು ನೀವು ಬೇರೆ ಏನನ್ನು ನೋಡಲು ಬಯಸುತ್ತೀರಿ ಎಂದು ನಮಗೆ ತಿಳಿಸಿ. ನಿಮ್ಮ ಬಡ್ಡಿಂಗ್ ಟೇಲರಿಂಗ್ ಸ್ನೇಹಿತರೊಮ್ಮಿದ್ದಿಗೆ ಶೇರ್ ಮಾಡುವುದನ್ನು ಮರೆಯಬೇಡಿ.